ಸಂದರ್ಭದಲ್ಲಿ ಇದರ ಬಗ್ಗೆ ನೀತಿಗಳನ್ನು ತರತಕ್ಕಂಥದ್ದು ಎನ್ನುವುದರ ಬಗ್ಗೆ ಹೇಳಿದ್ದೇನೆ. ಅದಕ್ಕೆ ನಾನು ಸ್ಪಷ್ಟೀಕರಣ ಕೊಡಲಿಕ್ಕೆ ಬಯಸುತ್ತೇನೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಮುಂದಿನ ಅಧಿವೇಶನದಲ್ಲಿ ಇದಕ್ಕೆ ಕ್ಲಾರಿಫೀಕೇಶನ್ ಕೇಳುವುದಕ್ಕೆ ಟೈಮ್‌ನ್ನು ಫಿಕ್ಸ್ ಮಾಡಿಕೊಡುತ್ತೀರಾ ಎಂದು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು : ನೋಡೋಣ. You can put questions. ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ನನ್ನೊಡನೆ ಸಹಕರಿಸಿದ ಶಭಾ ನಾಯಕರಾದ ಮಾನ್ಯ ಮುಖ್ಯಮಂತ್ರಿಗಳಿಗೆ, ವಿರೋಧ ಪಕ್ಷದ ನಾಯಕರಿಗೆ, ಸಚಿವರ ಸಂಪುಟದ ಸದಸ್ಯರುಗಳಿಗೆ, ವಿವಿಧ ಪಕ್ಷದ ನಾಯಕರುಗಳಿಗೆ ಹಾಗೂ ಎಲ್ಲಾ ಪಕ್ಷದ ಶಾಸಕರುಗಳಿಗೆ ಹಾಗೂ ಪತ್ರಿಕೆಗಳಲ್ಲಿ ಪ್ರಕಟಿಸಲು ಸಹಕರಿಸಿದ ಎಲ್ಲಾ ಮಾಧ್ಯಮದವರಿಗೆ ಹಾಗೂ ಕರ್ನಾಟಕ ವಿಧಾನಸಭೆ ಸಚಿವಾಲಯದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಈಗ ಸದನವನ್ನು ಅನಿರ್ಧಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

(ಸದನವು 8 ಗಂಟೆ 51 ನಿಮಿಷಕ್ಕೆ ಮುಕ್ತಾಯವಾಯಿತು)

ಅನುಬಂಧ–I

366(477) ಶ್ರೀ ಬೋಪಯ್ಯ (ಮಡಿಕೇರಿ) : ಮಾನ್ಯ ಆಹಾರ, ನಾಗರೀಕ ಗ್ರಾಹಕರ ವ್ಯವಹಾರಗಳು ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಡಿಕೇರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಶಾಸಕರ ನೇತೃತ್ವದ ಕುಡಿಯುವ ನೀರಿನ ಸಮಿತಿಯು ಸೆಪ್ಟೆಂಬರ್ 30ರ ವರೆಗೆ ಎಷ್ಟು ಯೋಜನೆಗಳನ್ನು ಶಿಫಾರಸ್ಸು ಮಾಡಿದೆ;

ಆ) ಎಷ್ಟು ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ;

ಇ) ಈ ಯೋಜನೆಗಳಿಗಾಗಿ ಸರ್ಕಾರವು ಎಷ್ಟು ಹಣ ಬಿಡುಗಡೆ ಮಾಡಿದೆ (ವಿವರ ನೀಡುವುದು);

ಈ) ಹಣ ಬಿಡುಗಡೆ ಮಾಡಲು ವಿಳಂಬವಾಗಲು ಕಾರಣವೇನು?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ, ನಾಗರೀಕ ಗ್ರಾಹಕರ ವ್ಯವಹಾರಗಳು ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವರು)

ಅ) 206 ಕುಡಿಯುವ ನೀರಿನ ಯೋಜನೆಗಳನ್ನು ಶಿಫಾರಸ್ಸು ಮಾಡಿದೆ.

ಆ) 26 ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ.

ಇ) ರೂ. 13.50 ಲಕ್ಷಗಳನ್ನು ಬಿಡುಗಡೆ ಮಾಡಿದೆ. ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಈ) ಕಾಮಗಾರಿ ಪೂರ್ಣಗೊಳಿಸಿದ ನಂತರ ಹಣ ಬಿಡುಗಡೆಯಾಗಿದೆ.

ಅನುಬಂಧ–1

ಶ್ರೀ ಕೆ.ಜಿ. ಬೋಪಯ್ಯ, MLAರವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 477ರ ಲಗತ್ತು -

(ರೂ.ಲಕ್ಷಗಳಲ್ಲಿ)

1.	ಕಾರುಗಂದಲ್ಲಿ ಕೊ.ಬಾ. ಹೈಡ್ರೋಪ್ರಾಕ್ಟರಿಂಗ್	0.095
2.	ಪಾಲೂರಿನಲ್ಲಿ ಕೊ.ಬಾ. ಹೈಡ್ರೋಪ್ರಾಕ್ಟರಿಂಗ್	0.095
3.	ಪೆರಾಜೆಯಲ್ಲಿ ಕೊ.ಬಾ. ಹೈಡ್ರೋಪ್ರಾಕ್ಟರಿಂಗ್	0.095
4.	ಬಾಳಂಬಿ ಕೊ.ಬಾ. ಹೈಡ್ರೋಪ್ರಾಕ್ಟರಿಂಗ್	0.095
5.	ಅರಪಟ್ಟು ಪೈಸಾರಿಯಲ್ಲಿ ಕೊ.ಬಾ. ಹೈಡ್ರೋಪ್ರಾಕ್ಟರಿಂಗ್	0.095
6.	ಕಣಾಂಗೇರಿಯಲ್ಲಿ ಕೊ.ಬಾ. ಹೈಡ್ರೋಪ್ರಾಕ್ಟರಿಂಗ್	0.095
7.	ಭಾಗಮಂಡಲ ಗ್ರಾ.ಪಂ.ಐ.ಟಿ. ಯ ಹತ್ತಿರ ಕೊ.ಬಾ. ಹೈಡ್ರೋಪ್ರಾಕ್ಟರಿಂಗ್	0.095
8.	ಕೆಬ್ಬಟಗೇರಿಯಲ್ಲಿ ಕೊ.ಬಾ. ಹೈಡ್ರೋಪ್ರಾಕ್ಟರಿಂಗ್	0.095
9.	ಕೊಟ್ಟಮುಡಿಯಲ್ಲಿ ಕೊ.ಬಾ. ಹೈಡ್ರೋಪ್ರಾಕ್ಟರಿಂಗ್	0.095
10.	ಹಿರೆಕಾಡುಯಲ್ಲಿ ಕೊ.ಬಾ. ಹೈಡ್ರೋಪ್ರಾಕ್ಟರಿಂಗ್	0.095
11.	ಮಕ್ಕಂದೂರು ಗ್ರಾ.ಪಂ. ಗಿರಿಯಲ್ಲಿ ಕೊ.ಬಾ. ಹೈಡ್ರೋಪ್ರಾಕ್ಟರಿಂಗ್	0.095
12.	ಮುರ್ನಾಡುನಲ್ಲಿ ಕೊ.ಬಾ. ಹೈಡ್ರೋಪ್ರಾಕ್ಟರಿಂಗ್	0.095
13.	ಮರಗೋಡುವಿನಲ್ಲಿ ಕೊ.ಬಾ. ಹೈಡ್ರೋಪ್ರಾಕ್ಟರಿಂಗ್	0.095
14.	ಕೋಣಂಜಗೇರಿ ಹರಿಜನ ಕಾಲೋನಿಯಲ್ಲಿ ತೆರೆದ ಬಾವಿ ಅಳವಡಿಸುವುದು	0.200
15.	ಮೇಲೇರಿಯಲ್ಲಿ ನಲ್ಲಿ ನೀರು ಯೋಜನೆ ಅಭಿವೃದ್ಧಿ	1.250
16.	ಬಾವಲಿಯಲ್ಲಿ ಹರಿಜನ ಕಾಲೋನಿಗೆ ತೆರೆದ ಬಾವಿ ಅಳವಡಿಸುವುದು	0.400
17.	ಚೇರಬಾವ್ ನೈಸರ್ಗಿಕ ನೀರು ಸರಬರಾಜು ಯೋಜನೆ	2.000
18.	ಪಾರಾಹೆ ಮಲದಂಡೆ ಕೈ ಸಾರಿಗೆ ನೀರು ಸರಬರಾಜು ಯೋಜನೆ	0.600
19.	ಕುಯ್ಯಂಗೇರಿ ಗ್ರಾಮಕ್ಕೆ ಪೈಪ್‌ಲೈನ್ ವಿಸ್ತರಣೆ	1.650
20.	ಕುಯ್ಯಂಗೇರಿ ಪೈಸಾರಿ ಹತ್ತಿರ ಕೊ.ಬಾ. ಅಳವಡಿಸುವುದು	0.100
21.	ಚೆಂಬೆ ಗ್ರಾ.ಪಂ. ಅಣ್ಣಯ್ಯ ಮನೆ ಹತ್ತಿರ ತೆ.ಬಾ. ಅಳವಡಿಸುವುದು	0.300
22.	ಮೇಕೇರಿ ಗ್ರಾಮದ ಟಿ.ಎಸ್. ಗಾಯಿತ್ರಿ ಕುಟುಂಬ ಬಳಿ ತೆ.ಬಾ ಅಳವಡಿಸುವುದು	0.200
23.	ಕುದದೆಪಾಯ ಗಿರಿಜನ ಕಾಲೋನಿಗೆ ನೈಸರ್ಗಿಕ ನೀರು ಸರಬರಾಜು	2.500

1	2	3
24.	ನಂಗಾರು ಕುಟುಂಬ ಇರುವ ನೈಸರ್ಗಿಕ ಯೋಜನೆ ಪೈಪ್	0.500
25.	ಅರ್ವತ್ತೊಕ್ಲು ಗ್ರಾಮದ ಜಾನಕಿ ಮನೆ ಹತ್ತಿರ ತೆರೆದ ಬಾವಿ ನಿರ್ಮಾಣ	0.500
26.	ಪೇರೂರಿನಿಂದ ಅಪ್ಪನೆರವಂಡ ಕುಟುಂಬಸ್ಥರಿಗೆ ನೈಸರ್ಗಿಕ ನೀರು ಸರಬರಾಜು ಯೋಜನೆ	1.000
27.	ಇತರೆ	1.000
	ಒಟ್ಟು ಮುಗಿದಿರುವ ಕಾಮಗಾರಿಗಳ ಸಂಖ್ಯೆ –26.	

367(523) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆಯ ಕೂಡಿಗೆ ಕೃಷಿ ಇಲಾಖೆಯಲ್ಲಿ ಶೇಖರಿಸಿಟ್ಟ ಭತ್ತದ ಬೆಳೆ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರೀತಿ ನಾಶವಾಗಲು ಕಾರಣವೇನು;

ಇ) ಭತ್ತದ ಬೆಳೆ ನಾಶವಾಗಿರುವುದರಿಂದ ಪರಿಹಾರ ವಿತರಣೆ ಮಾಡಲಾಗಿದೆಯೇ (ವಿವರ ನೀಡುವುದು)?

ಶ್ರೀ ಬಂಡಪ್ಪ ಕಾಶಂಪೂರ್ (ಕೃಷಿ ಸಚಿವರು)

ಅ) ಬಂದಿದೆ.

ಆ) ಮಾರ್ಚ್ 2006ರ ಮಾಹೆಯ 1 ಮತ್ತು 2ನೇ ವಾರದಲ್ಲಿ ಬಿದ್ದ ಆಕಸ್ಮಿಕ ಮಳೆಯಿಂದ ಹಾಗೂ ಬಿರುಗಾಳಿಯಿಂದ ಕೂಡಿಗೆ ಫಾರಂನಲ್ಲಿ ಶೇಖರಿಸಿ ಇಟ್ಟಿದ್ದ ಭತ್ತದ ಮೆದೆಯಲ್ಲಿ ಅಂದಾಜು 50 ಕ್ವಿಂಟಾಲ್ ಭತ್ತ ನಷ್ಟವಾಗುವ ಸಾಧ್ಯತೆ ಇದೆ. ಭತ್ತದ ಮೆದೆಗೆ ಸೂಕ್ತವಾದ ಟಾರ್‌ಪಾಲ್‌ಗಳು ಮತ್ತು ಪ್ಲಾಸ್ಟಿಕ್ ಶೀಟ್‌ಗಳನ್ನು ಹೊದಿಸಿದ್ದರೂ ಸಹ ದಿನಾಂಕ: 4–3–2006ರಂದು ಬಂದ ಬಿರುಗಾಳಿಯಿಂದ ಟಾರ್‌ಪಾಲ್ ಶೀಟ್ ಹಾರಿಹೋಗುವುದನ್ನು ತಡೆಗಟ್ಟಲಾಗಲಿಲ್ಲ. ದಿನಾಂಕ: 5–3–2006 ರಿಂದ 10–3–2006ರವರೆಗೆ 56.70 ಮೀ.ಮೀ. ಮಳೆಯಾಗಿರುತ್ತದೆ. ಇದು ಪ್ರಕೃತಿ ವಿಕೋಪ ಮಳೆಯೆಂದು ಪರಿಗಣಿಸಲಾಗಿದೆ.

ಇ) ಬರ ಪರಹಾರ ಮಾರ್ಗಸೂಚಿಯಡಿಯಲ್ಲಿ ಸದರಿ ವಿಷಯದ ಬಗ್ಗೆ ಪರಿಶೀಲಿಸಲಾಗುತ್ತಿದೆ.

368(524) ಶ್ರೀ ಬೋಪಯ್ಯ (ಮಡಿಕೇರಿ) : ಮಾನ್ಯ ಮೀನುಗಾರಿಕೆ, ಮುಜರಾಯಿ ಹಾಗೂ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಡಿಕೇರಿ ನಗರದ ರಾಜರ ಗದ್ದಿಗೆಗೆ ಸಂಬಂಧಪಟ್ಟಂತೆ ಇರುವ ಜಾಗದ ವಿಸ್ತೀರ್ಣವೆಷ್ಟು;